JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಅಲೆಮಾರಿ ದನಗಾಹಿಗಳ ಆರ್ಥಿಕತೆ
# (Economy of Nomadic Herdsmen)

ತಿಪ್ಪೇಸ್ವಾಮಿ ಬಿ
ಸಂಶೋಧನಾರ್ಥಿ
ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ-583 276

**ಪ್ರಸ್ತಾವನೆ**

ಭಾರತ ದೇಶವು ಹಲವಾರು ಜಾತಿ, ಧರ್ಮ, ಸಮುದಾಯ, ಹಾಗೂ ವೈವಿಧ್ಯಮಯವಾದ ಸಂಪ್ರದಾಯ, ಆಚರಣೆಗಳನ್ನು ತನ್ನ ಮಡಿಲೊಳಗೆ ಇಟ್ಟುಕೊಂಡು ಸಾಗಿಬರುತ್ತಿರುವ ದೇಶವಾಗಿದೆ. ಇಂತಹ ಹಲವಾರು ಸಮುದಾಯಗಳಲ್ಲಿ ದನಗಾಹಿ ಸಮುದಾಯಗಳು ತನ್ನದೇ ಆದ ಸಂಪ್ರದಾಯ, ಆಚರಣೆಗಳನ್ನು ಹೊಂದಿವೆ. ಬೇರೆ ಸಮುದಾಯಗಳು ತಮ್ಮ ಕುಲಕಸುಬು ಅಥವಾ ವೃತ್ತಿಗಳಿಗಳಿಂದ ಬದಲಾವಣೆ ಹೊಂದಿ ಅಭಿವೃದ್ಧಿ ಕಡೆಗೆ ಸಾಗಿರುವುದನ್ನು ನಾವು ಕಾಣಬಹುದಾಗಿದೆ. ಆದರೆ ದನಗಾಹಿ ಸಮುದಾಯಗಳು ತಮ್ಮ ಪಾರಂಪರಿಕ ಕುಲಕಸಬುಗಳಿಂದಾಚೆಗೆ ಬಾರದೆ ಯಾವುದೇ ಅಭಿವೃದ್ಧಿಯನ್ನು ಹೊಂದದೆ ಹಿಂದುಳಿದ ಸ್ಥಿತಿಯಲ್ಲೇ ಸಾಗಿಬರುತ್ತಿವೆ. ಸಮಾಜದಲ್ಲಿ ಯಾವುದೇ ಒಂದು ಸಮುದಾಯ/ಕುಟುಂಬಗಳು ಉತ್ತಮವಾದಂತಹ ಜೀವನವನ್ನು ರೂಪಿಸಿಕೊಳ್ಳಬೇಕಾದರೆ ಅವರ ಕುಟುಂಬದ ಆದಾಯ ಮುಖ್ಯ ಪಾತ್ರವಾಹಿಸುವುದು.

ಪಶುಪಾಲಕರಲ್ಲಿ ಮುಖ್ಯವಾಗಿ ಮ್ಯಾಸ(ಮೇಷ)ಬೇಡರು, ಕಾಡುಗೊಲ್ಲರು, ಕುರುಬರು ಮತ್ತು ದ(ಧ)ನಗಾರರು ಮುಖ್ಯವಾಗಿರುವರು. ಅದರಲ್ಲಿಯೂ ದನಗಳನ್ನು ಮಾತ್ರ ಸಾಕಾಣಿಕೆ ಮಾಡುವಂತಹ ದನಗಾಹಿಗಳು ವರ್ಷವಿಡೀ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ತಮ್ಮ ಕುಟುಂಬದ ಜೊತೆಗೆ ದನಗಳನ್ನು ಮೇಯಿಸಲು ಹೊಡೆದುಕೊಂಡು ಹೋಗಿ ಇವರು ವರ್ಷವಿಡೀ ಅಲೆಮಾರಿತನದಲ್ಲೇ ಜೀವನ ನಡೆಸುತ್ತಾರೆ. ಇವರ ಸಾಮಾಜಿಕ, ಆರ್ಥಿಕ, ಸ್ಥಿತಿಗಳು ಉತ್ತಮವಾಗಿ ಕಂಡುಬರುತ್ತಿಲ್ಲ. ಅದಕ್ಕಾಗಿ ದನಗಾಹಿಗಳ ಆರ್ಥಿಕ ಸ್ಥಿತಿಯನ್ನು ತಿಳಿಯಬೇಕೆಂಬ ಉದ್ದೇಶವನ್ನು ಹೊಂದಿ ಕ್ಷೇತ್ರಕಾರ್ಯ ಕೈಗೊಂಡ ಮಾಹಿತಿ ಮೂಲಕ ಸಿದ್ಧಪಡಿಸಿದ ಸಂಶೋದನಾ ಪತ್ರಿಕೆ ಇದಾಗಿದೆ.

**ಮುಖ್ಯ ಪದಗಳು :** ಅಲೆಮಾರಿ, ದನಗಾಹಿ,ದನಕರು, ಶೆಡ್ಡು/ಹಟ್ಟಿ, ಬೀಡು/ತರುಬು, ಹಗ್ಗ(ದಾವಣಿ), ಸಗಣಿ.

**ಉದ್ದೇಶ**

1. ಅಲೆಮಾರಿ ದನಗಾಹಿಗಳ ಆದಾಯದ ಮೂಲ ಹಾಗೂ ಅವರ ಆರ್ಥಿಕತೆಯನ್ನು ತಿಳಿಯುವುದು.

**ಅಲೆಮಾರಿ ದನಗಾಹಿ ಪದದ ಅರ್ಥ :** ದನಗಾಹಿ ಪದದ ಅರ್ಥವನ್ನು ನೋಡಿದಾಗ ದನಗಳನ್ನು ಮೇಯಿಸುವ ವ್ಯಕ್ತಿ, ಗೋಪಾಲಕ, ಗೊಲ್ಲ, ದನಕಾಯುವವ ಎಂಬ ಅರ್ಥವನ್ನು ನೀಡುವುದು. ದನಗಳನ್ನು ಕಾಯುವ ವ್ಯಕ್ತಿಗೆ ದನಗಾಹಿ ಎಂದು ಕರೆಯುವರು.

**ಅಲೆಮಾರಿ ದನಗಾಹಿ ಎಂದರೆ :** ವಂಶ ಪಾರಂಪರಿಕವಾಗಿ ಒಂದು ಅಥವಾ ಎರಡಕ್ಕಿಂತ ಹೆಚ್ಚು ತಲೆಮಾರುಗಳಿಂದ ತಮ್ಮ ಮನೆಯ ದನಗಳನ್ನು ಸಾಕಾಣಿಕೆ ಮಾಡುತ್ತಾ, ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ದನಗಳನ್ನು ಮೇಯಿಸಲು ಹೋಗುವ ದನಗಾಹಿಗಳಿಗೆ ಅಲೆಮಾರಿ ದನಗಾಹಿ ಎಂದು ಕರೆಯುವರು. ದನಗಾಹಿಗಳಲ್ಲಿ ಎರಡೂ ರೀತಿಯ ದನಗಾಹಿಗಳನ್ನು ನಾವು ಕಾಣಬವುದು. ಅವು,

೧. ಊರಿನ ಎಲ್ಲಾ ಜನರ ದನಗಳನ್ನು ಗುತ್ತಿಗೆಯಾಗಿ ಅಥವಾ ಹಣಕ್ಕಾಗಿ ಕಾಯುವ ಊರಿನ ದನಗಾಹಿಗಳು.

೨. ವಂಶ ಪಾರಂಪರಿಕವಾಗಿ ತಮ್ಮ ಮನೆಯ ಸ್ವಂತ ದನಗಳನ್ನು ಕಾಯುವ ದನಗಾಹಿಗಳು.

ಅಲೆಮಾರಿ ದನಗಾಹಿಗಳು ಎಂದು ಕರೆಯುವ/ಕರೆಸಿಕೊಳ್ಳುವ ಜನರು ದನಗಳ ಸಾಕಾಣಿಕೆಯನ್ನು ತಮ್ಮ ಮುಖ್ಯ ಕಸುಬನ್ನಾಗಿಸಿಕೊಂಡವರು, ಈ ಅಲೆಮಾರಿ ದನಗಾಹಿಗಳು ತಮ್ಮ ದನಗಳಿಗೆ ನಿರಂತರವಾದ ಹುಲ್ಲುಗಾವಲು ಪ್ರದೇಶ ಅವಶ್ಯಕವಾಗಿರುವುದರಿಂದ ವರ್ಷಕ್ಕೆ ಹಲವು ಬಾರಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ತಮ್ಮ ಕುಟುಂಬದ ಜೊತೆಗೆ ದನಗಳನ್ನು ಮೇಯಿಸಲು ಹೋಗುವರು.

**ಅಲೆಮಾರಿ ದನಗಾಹಿಗಳು ವಾಸಿಸುವ ನೆಲೆಗಳು**



(ಈ ಮೇಲಿನ ಛಾಯಾಚಿತ್ರಗಳು ದನಗಾಹಿಗಳು ವಾಸಿಸುವಂತಹ ನೆಲೆ(ಹಟ್ಟಿ)ಗಳಲ್ಲಿ ವಾಸಿಸಲು ನಿರ್ಮಿಸಿಕೊಂಡಿರುವ ಗುಡಾರಗಳು ಹಾಗೂ ಅವುಗಳಲ್ಲಿನ ಒಳಾಂಗಣದ ನೋಟವನ್ನು ಒಳಗೊಂಡಿದೆ). ದನಗಾಹಿಗಳು ವಾಸಿಸುವ ನೆಲೆಗಳನ್ನು ನೋಡಿದರೆ ತಿಳಿಯುತ್ತದೆ. ಇವರು ಎಷ್ಟರ ಮಟ್ಟಿಗೆ ಆರ್ಥಿಕವಾಗಿ ಸಬಲರಾಗಿರುವರೆಂದು. ಅಲೆಮಾರಿತನ ಹೋದ ಪ್ರದೇಶಗಳಲ್ಲಿ ತಾವೇ ನಿರ್ಮಿಸಿಕೊಂಡಂತಹ ನೆಲೆಗಳಿಗೆ ಗುಡಾರ, ಶೆಡ್ಡು(ಹಟ್ಟಿ) ಎಂದು ಕರೆಯುವರು. ಇವುಗಳನ್ನು ತಾಟ್‌ಪಲ್‌ಗಳಿಂದ ನಿರ್ಮಿಸಿಕೊಂಡಿದ್ದು ರಾತ್ರಿ ಬೆಳಕಿನ ವ್ಯವಸ್ಥೆಗಾಗಿ ಎಣ್ಣೆ ದೀಪಗಳು, ಚಾರ್ಜರ್ ಬ್ಯಾಟರಿಗಳು ಮತ್ತು ಸೋಲಾರ್ ಬ್ಯಾಟರಿಗಳನ್ನು ಬಳಸುವರು. ಈ ಗುಡಾರ, ಶೆಡ್ಡು(ಹಟ್ಟಿ)ಗಳಲ್ಲಿ ದನಗಾಹಿಗಳ ಕುಟುಂಬದ ದೊಡ್ಡವ/ಹಿರಿಯರಿಂದ ಚಿಕ್ಕ ಮಕ್ಕಳವರೆಗೂ ವಾಸಿಸುವರು. ಮಳೆಗಾಲದ ಸಂದರ್ಭದಲ್ಲಿ ಗುಡಾರಗಳಲ್ಲಿ ರಾತ್ರಿ ಮಲಗುವುದಕ್ಕೆ ಹಾಗೂ ಅಡುಗೆ ತಯಾರಿಸಿಕೊಳ್ಳುವುದಕ್ಕೆ ತುಂಬಾ ಕಷ್ಟವಾಗುವುದು ಹಾಗೂ ಬೇಸಿಗೆಯಲ್ಲಿ ಬಿಸಿಲಿನ ತಾಪಮಾನದ ಜೊತೆಗೆ ವರ್ಷವಿಡೀ ದನಗಾಹಿಗಳು ಅಲೆಮಾರಿತನದಲ್ಲೇ ಜೀವನ ನಡೆಸುವರು.

**ದನಗಾಹಿಗಳು ಪ್ರತಿದಿನ ದನಗಳ ಸಾಕಾಣಿಕೆ ಮಾಡುವ ವಿಧಾನ**




(ಈ ಮೇಲಿನ ಛಾಯಾಚಿತ್ರಗಳು ದನಗಾಹಿಗಳು ಪ್ರತಿದಿನ ದನಗಳನ್ನು ಸಾಕಾಣಿಕೆ ಮಾಡುವುದನ್ನು ತಿಳಿಸುತ್ತವೆ). ದನಗಾಹಿಗಳು ಬೆಳಿಗ್ಗೆ ಊಟ ಮಾಡಿಕೊಂಡು ದನಗಳನ್ನು ಮೇಯಿಸಲು ಹೋಗಿ ಪುನಃ ಸಂಜೆ ಹೊತ್ತಿಗೆ ತಮ್ಮ ಹಟ್ಟಿಗಳಿಗೆ ಹಿಂದಿರುಗಿ ಬರುವರು. ಇವರು ಹೆಚ್ಚು ಜವಾರಿ, ಕಿಲಾರಿ ತಳಿಯ ದನಗಳನ್ನು ಸಾಕುತ್ತಿದ್ದಾರೆ. ದನಗಳನ್ನು ಕಟ್ಟಿ ಹಾಕಲು ಹಗ್ಗ(ದಾವಣಿ)ಯನ್ನು ಬಳಸುವರು. ರೈತರ ಹೊಲದಲ್ಲಿ ಹಗ್ಗ(ದಾವಣಿ)ದಿಂದ ಕಟ್ಟಿ ಹಾಕುವರು ಮತ್ತು ಬೆಟ್ಟ, ಗುಡ್ಡಗಳಲ್ಲಿ ಹೋದಾಗ ದನಗಳ ಸುತ್ತ ಮುಳ್ಳಿನ ಬೇಲಿ ಹಾಕುವರು. ಸತ್ತ ದನಗಳನ್ನು ತಿನ್ನಲು ಕೊಡುವುದಿಲ್ಲ ಮಣ್ಣಿನಲ್ಲಿ ಉಳುವರು ಕೆಲವು ಬಾರಿ ಹಾಗೆಯೇ ಬಿಟ್ಟು ಮುಂದೆ ಹೋಗುವರು. ದನಗಳ ಕರುಗಳಿಗೆ ಮೇವು, ನೀರು ನೋಡಿಕೊಳ್ಳಲು ಕುಟುಂಬದ ಒಬ್ಬ ಅಥವಾ ಇಬ್ಬರು ತಮ್ಮ ಹಟ್ಟಿಗಳ ಬಳಿ ಇರುತ್ತಾರೆ.

**ಅಲೆಮಾರಿ ದನಗಾಯಹಿ ಕುಟುಂಬಗಳ ಆದಾಯದ ಮೂಲಗಳು**

ಅಲೆಮಾರಿ ದನಗಾಹಿಗಳು ದನಗಳ ಸಾಕಾಣಿಕೆಯನ್ನೆ ಮುಖ್ಯ ಕಸುಬನ್ನಾಗಿಸಿಕೊಂಡುಬರುತ್ತಿದ್ದು, ಬೇರೆ ಯಾವುದೆ ಕೆಲಸ/ಉದ್ಯೋಗವನ್ನು ಇವರು ಮಾಡುವುದಿಲ್ಲ. ಅದರಿಂದ ಇವರಿಗೆ ದನಗಳ ಸಾಕಾಣಿಕೆಯಿಂದ ಬರುವ ಆದಾಯದ ಮೂಲಗಳು 1. ದನಕರುಗಳ ಮಾರಾಟ, 2. ದನಗಳ ಸಗಣಿ(ಗೊಬ್ಬರ)ಯ ಮಾರಾಟವಾಗಿದೆ.

**1. ದನಕರುಗಳ ಮಾರಾಟ**

ದನಗಾಹಿಗಳು 100 ರಿಂದ ೫00, ೧,000 ವರೆಗೂ ದನಗಳನ್ನು ಸಾಕಾಣಿಕೆ ಮಾಡುತ್ತಿದ್ದರೂ ಕೂಡ ಅವರು ಹಾಲು, ಮೊಸರು, ತುಪ್ಪವನ್ನು ಮಾರಾಟ ಮಾಡುವುದಿಲ್ಲ. ದನಗಳಿಗೆ ಹುಟ್ಟುವ ಕರುಗಳನ್ನು ಅದರಲ್ಲಿಯೂ ಗಂಡು ಕರು(ಹೋರಿ)ಗಳನ್ನು ಮಾರಾಟ ಮಾಡುವುದರಿಂದ ಹಾಲನ್ನು ಕರುಗಳು ಕುಡಿಯಲಿ ಎಂದು ಬಿಡುವರು. ದನಕರುಗಳನ್ನು ಅವುಗಳ ವಯಸ್ಸಿನ ಆಧಾರದ ಮೇಲೆ ಮಾರಾಟ ಮಾಡುವರು. ಅವು,

| **ಕ್ರ. ಸಂ** | **ದನಕರುಗಳ ಮಾರಾಟ ಮಾಡುವ ವಯಸ್ಸು** | **ದನಕರುಗಳ ಮಾರಾಟ ಮಾಡುವ ಮೊತ್ತ** | |
|---|---|---|---|
| 1 | ಒಂದು ವರ್ಷದ ಒಳಗಿನ ಒಂದು ಕರು | 12,000 ರೂ.ಗಳಿಂದ | 13,000 ರೂ.ಗಳವರೆಗೆ |
| 2 | ಒಂದು ವರ್ಷದ ಮೇಲಿನ ಒಂದು ಕರು | 10,000 ರೂ.ಗಳಿಂದ | 14,000 ರೂ.ಗಳವರೆಗೆ |
| 3 | ಜೊತೆ ಗಂಡು(ಹೋರಿ)ಕರುಗಳು | 25,000 ರೂ.ಗಳಿಂದ | 30,000 ರೂ.ಗಳವರೆಗೆ |
| 3 | ವಯಸ್ಸಾದ ದನಗಳು | 13,000 ರೂ.ಗಳಿಂದ | 15,000 ರೂ.ಗಳವರೆಗೆ |

**ಒಂದು ವರ್ಷದ ಒಳಗಿನ ಕರು :** ರೈತರು ಒಂದು ವರ್ಷದ ಒಳಗಿನ ಕರುಗಳನ್ನೆ ಹೆಚ್ಚು ತೆಗೆದುಕೊಂಡು ಹೋಗುವರು. ದನಗಾಹಿಗಳು ಈ ಕರುಗಳನ್ನು ಮಾರುಕಟ್ಟೆಗೆ ಹೊಡೆದುಕೊಂಡು ಹೋಗಿ ಮಾರಾಟ ಮಾಡುವುದಿಲ್ಲ. ದನಗಾಹಿಗಳು ಇರುವಲ್ಲಿಯೇ ರೈತರು ಬಂದು ಕರುಗಳನ್ನು ತೆಗೆದುಕೊಂಡು ಹೋಗುವರು.

**ಒಂದು ವರ್ಷದ ಮೇಲಿನ ಕರು :** ವರ್ಷದ ಮೇಲಿನ ಕರುಗಳನ್ನು ಮಾರಾಟ ಮಾಡುವುದು ಬಹಳ ಕಡಿಮೆ ಅಲಿಯವರೆಗೂ ಅವುಗಳನ್ನು ಇಟ್ಟುಕೊಳ್ಳುವುದಿಲ್ಲ. ಅದರೆ ಕೆಲವು ಬಾರಿ ರೈತರು ಕರುಗಳನ್ನು ತೆಗೆದುಕೊಳ್ಳುವಾಗ ಅವುಗಳ ದೇಹದ ಲಕ್ಷಣಗಳಾದ ಕಣ್ಣು, ಕೊಂಬು/ಕೋಡು, ಹಲ್ಲು, ಸುಳಿಗಳು, ಕಾಲುಗಳು ಮುಂತಾದುವುಗಳನ್ನು ನೋಡಿ ತೆಗೆದುಕೊಳ್ಳುವರು. ದೇಹದಲ್ಲಿ ಸಮಸ್ಯೆ ಇರುವ ಕರುಗಳು ಹಾಗೆಯೇ ಉಳಿಯುತ್ತವೆ. ಇಂತಹ ಕರುಗಳನ್ನು ಕಟುಕರಿಗೆ ಕಡಿಮೆ ಬೆಲೆಗೆ ಕೊಡುವರು.

**ಜೊತೆ ಗಂಡು(ಹೋರಿ)ಕರುಗಳು :** ದನಗಾಹಿಗಳು ರೈತರು ಬಯಸುಂತಹ ದನದ ತಳಿಗಳನ್ನು ಬೆಳೆಸಲು ಮಾರುಕಟ್ಟೆ ಅಥವಾ ಬೇರೆ ಕಡೆಯಿಂದ ಉತ್ತಮ ತಳಿಯ ಬೀಜದ ಹೋರಿಯನ್ನು ತಂದು ಅದರ ತಳಿಯ ಕರುಗಳನ್ನು ಸಾಕುವರು. ರೈತರು ತಮ್ಮ ಜಮೀನುಗಳಲ್ಲಿ ಉಳುಮೆ ಮಾಡಲು ಜೊತೆ ಗಂಡು(ಹೋರಿ)ಕರುಗಳನ್ನು ಒಂದೇ ಸಾರಿ ತೆಗೆದುಕೊಳ್ಳುವುದರಿಂದ ದನಗಾಹಿಗಳು ಹೆಚ್ಚು ಗಂಡು(ಹೋರಿ)ಕರುಗಳನ್ನು ಜೋಡಿಯಾಗಿ ಮಾರಾಟ ಮಾಡುವರು.

**ವಯಸ್ಸಾದ ದನಗಳು :** ವಯಸ್ಸಾದಂತಹ ಮತ್ತು ಯಾವುದಾದರು ತೊಂದರೆಗೆ ಒಳಗಾದಂತಹ ದನಗಳನ್ನು ಕಟುಕರಿಗೆ ಮಾರಾಟ ಮಾಡುವರು. ಕಟುಕರಿಗೆ ಏಕೆ ದನಗಳನ್ನು ಮಾರಾಟ ಮಾಡುವರೆಂದರೆ ವಯಸ್ಸಾದಂತಹ ದನಗಳನ್ನು ಯಾರು ತೆಗೆದುಕೊಳ್ಳುವುದಿಲ್ಲ ಹಾಗೂ ಅವುಗಳು ದೂರ ದೂರದ ಪ್ರದೇಶಗಳಿಗೆ ನಡೆಯುವುದು ಕಷ್ಟವಾಗುವುದರಿಂದ ವಯಸ್ಸಾದಂತಹ ದನಗಳನ್ನು ಕಟುಕರಿಗೆ ಮಾರಾಟ ಮಾಡುವರು. ಆದರೆ ಇತ್ತೀಚಿನ ದಿನಗಳಲ್ಲಿ ಸರ್ಕಾರವು ಗೋಹತ್ಯೆ ನಿಷೇಧವನ್ನು ಮಾಡಿರುವುದರಿಂದ ವಯಸ್ಸಾದಂತಹ ದನಗಳನ್ನು ಕೂಡ ಕಟುಕರು ತೆಗೆದುಕೊಳ್ಳಲು ಮುಂದೆ ಬರುತ್ತಿಲ್ಲ. ಮಾರುಕಟ್ಟೆಗಳಿಗೂ ಅವುಗಳನ್ನು ತೆಗೆದುಕೊಂಡು ಹೋಗಿ ಮಾರಾಟ ಮಾಡುವುದಕ್ಕೂ ಕಷ್ಟವಾಗಿರುವುದು.



(ಈ ಮೇಲಿನ ಛಾಯಾಚಿತ್ರಗಳು ದನಗಾಹಿಗಳು ಮಾರಾಟ ಮಾಡುವಂತ ವಯಸ್ಸಾದ ದನ ಮತ್ತು ಕರುಗಳ ಸೂಚಿಸುತ್ತವೆ).

**2. ದನಗಳ ಸಗಣಿ(ಗೊಬ್ಬರ) ಮಾರಾಟ**

| **ಕ್ರ. ಸಂ** | **ದನಗಳ ಸಗಣಿ(ಗೊಬ್ಬರ)ಯ ಮಾರಾಟ ವಿಧಾನಗಳು** | **ದನಗಳ ಸಗಣಿ(ಗೊಬ್ಬರ)ಯ ಮಾರಾಟದ ಮೊತ್ತ** | |
|---|---|---|---|
| 1 | ರೈತರ ಹೊಲದಲ್ಲಿ ಒಂದು ದಿನ ಹಟ್ಟಿ/ಬೀಡು/ತರುಬುವುದು | 700 ರೂ.ಗಳಿಂದ | 1,000 ರೂ.ಗಳವರೆಗೆ |
| 2 | ಒಂದು ಟ್ರ್ಯಾಕ್ಟರ್ ಲೋಡಿಗೆ ಸಂಗ್ರಹಿಸಿದ ಸಗಣಿ ಮಾರಾಟ | 2,500 ರೂ.ಗಳಿಂದ | 3,000 ರೂ.ಗಳವರೆಗೆ |

**1. ರೈತರ ಹೊಲದಲ್ಲಿ ಒಂದು ದಿನ ಹಟ್ಟಿ/ಬೀಡು/ತರುಬುವುದು :** ಬೇಸಿಗೆಯ ಸಂದರ್ಭದಲ್ಲಿ ರೈತರು ತಮ್ಮ ಜಮೀನು(ಹೊಲ)ನಲ್ಲಿ ಬೆಳೆಗಳನ್ನು ಕಟಾವು ಮಾಡಿದ ನಂತರ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಲು ದನಗಳ ಸಗಣಿಯ ಗೊಬ್ಬರಕ್ಕಾಗಿ ಹಟ್ಟಿ/ಬೀಡು/ತರುಬಿಸುವರು. ದನಗಾಹಿಗಳು ಒಂದು ದಿನ ಹಟ್ಟಿ/ಬೀಡು/ತರುಬಿದರೆ 700 ಅಥವಾ ೧,೦೦೦ ರೂ.ಗಳು ರೈತರು ಕೊಡುವರು. ಈ ಹಣವನ್ನು ದನಗಳು ಎಷ್ಟು ಸಂಖ್ಯೆಯಲ್ಲಿವೆ ಎಂಬುವುದರ ಮೇಲೆ ಹಣವನ್ನು ನಿಗದಿಪಡಿಸುವರು. ಕೆಲವು ಬಾರಿ ಹಣದ ಬದಲು ದವಸ ಧಾನ್ಯ/ಕಾಳುಗಳನ್ನು ದನಗಾಹಿಗಳಿಗೆ ರೈತರು ನೀಡುವರು.

**2. ಒಂದು ಟ್ರ್ಯಾಕ್ಟರ್ ಲೋಡಿಗೆ ಸಂಗ್ರಹಿಸಿದ ಸಗಣಿ ಮಾರಾಟ :** ಮಳೆಗಾಲದ ಸಂದರ್ಭದಲ್ಲಿ ದನಗಳನ್ನು ಮೇಯಿಸಲು ಬೆಟ್ಟ, ಗುಡ್ಡದ ಪ್ರದೇಶಗಳಿಗೆ ಹೋದಾಗ ಅಲ್ಲಿ ದನಗಳ ಸಗಣಿಯ ಗೊಬ್ಬರವನ್ನು ದನಗಾಹಿಗಳು ಒಂದು ಕಡೆ ಸಂಗ್ರಹಿಸಿ ನಂತರ ರೈತರಿಗೆ ಮಾರಾಟ ಮಾಡುವರು. ಒಂದು ಟ್ರ್ಯಾಕ್ಟರ್ ಲೋಡಿಗೆ ೨,೦೦೦ ದಿಂದ ೩,೦೦೦ ರೂ.ಗಳನ್ನು ಕೊಟ್ಟು ರೈತರು ಸಗಣಿಯನ್ನು ತೆಗೆದುಕೊಂಡು ಹೋಗುವರು. ಕೆಲವು ಬಾರಿ ರೈತರು ಯಾರು ಕೂಡ ಸಂಗ್ರಹಿಸಿದ ಸಗಣಿಯನ್ನು ತೆಗೆದುಕೊಂಡು ಹೋಗದಿದ್ದಲ್ಲಿ ಆ ಸಗಣಿ(ಗೊಬ್ಬರ)ಯನ್ನು ಅಲ್ಲಿಯೇ ಬಿಟ್ಟು ದನಗಳನ್ನು ಮೇಯಿಸಲು ಮುಂದೆ ಹೋಗುವರು.



(ಈ ಮೇಲಿನ ಛಾಯಾಚಿತ್ರಗಳು ದನಗಾಹಿಗಳು ದನಗಳ ಸಗಣಿ(ಗೊಬ್ಬರ)ಯನ್ನು ಸಂಗ್ರಹಿಸುತಿರುವುದು ಮತ್ತು ರೈತರ ಹೊಲಗಳಲ್ಲಿ ದನಗಳ ಸಗಣಿ(ಗೊಬ್ಬರ)ಗಾಗಿ ಹಟ್ಟಿ/ಬೀಡು/ತರುಬಿರುವದನ್ನು ಸೂಚಿಸುತ್ತವೆ).

**ದನಗಳ ಸಾಕಾಣಿಕೆಗೆ ಬರುವ ಖರ್ಚುಗಳು**

**1. ದನಗಳನ್ನು ಕಟ್ಟಿ ಹಾಕುವ ಹಗ್ಗ(ದಾವಣಿ)ಕ್ಕಾಗಿ :** ರೈತರ ಹೊಲದಲ್ಲಿ ದನಗಳ ಸಗಣಿ(ಗೊಬ್ಬರ)ಗಾಗಿ ಹಟ್ಟಿ/ಬೀಡು/ತರುಬಿದಾಗ ಪಕ್ಕದ ರೈತರ ಹೊಲಗಳಲ್ಲಿರುವ ಬೆಳೆಗಳನ್ನು ತಿನ್ನಬಾರದು ಎಂದು ದನಗಳನ್ನು ಹಗ್ಗ(ದಾವಣಿ)ದಿಂದ ಕಟ್ಟಿ ಹಾಕುವರು. ಈ ಹಗ್ಗ(ದಾವಣಿ)ಗಳನ್ನು ಅಂಗಡಿಗಳಲ್ಲಿ ಅಥವಾ ಸಂತೆಗಳಲ್ಲಿ (ಒಂದು ಹಗ್ಗ(ದಾವಣಿ)ಕ್ಕೆ ಅಂದಾಜು ೧,೫೦೦ ರೂ ಕೊಟ್ಟು) ತೆಗೆದುಕೊಂಡು ಬರುವರು. ಕೆಲವು ದನಗಾಹಿಗಳು 100 ರಿಂದ 500,

1000 ದವರೆಗೂ ದನಗಳನ್ನು ಸಾಕುತ್ತಿರುವುದರಿಂದ ಈ ಎಲ್ಲಾ ದನಗಳನ್ನು ಕಟ್ಟಿ ಹಾಕಲು ಬಳಸುವ ಹಗ್ಗ(ದಾವಣಿ)ಕ್ಕಾಗಿಯೇ ವರ್ಷದಲ್ಲಿ 10,000 ದಿಂದ 15,000 ರೂ.ಗಳವರೆಗೂ ಹಣ ಖರ್ಚಾಗುವುದು.

**2. ಉತ್ತಮ ತಳಿಯ ಬೀಜದ ಹೋರಿಗಳು :** ರೈತರು ತಮ್ಮ ಜಮೀನುಗಳಲ್ಲಿ ಉಳುಮೆ ಮಾಡಲು ಉತ್ತಮವಾದಂತಹ ದನದ ತಳಿಗಳನ್ನು ಬೇಕಾಗುವುದರಿಂದ ದನಗಾಹಿಗಳು ಮಾರುಕಟ್ಟೆ ಅಥವಾ ಬೇರೆ ಕಡೆಯಿಂದ ಬೀಜದ ಹೋರಿಗಳನ್ನು ತಂದು ಅದರ ತಳಿಯ ಕರುಗಳನ್ನು ಸಾಕುವರು. ಕಿಲಾರಿ ಬೀಜದ ಹೋರಿಗೆ 80,000 ರೂ.ಗಳಿಂದ 1,00,000 ರೂ.ಗಳವರೆಗೂ ಹಣ ಖರ್ಚಾಗುವುದು.

**3. ದನಗಳಿಗೆ ಬರುವ ರೋಗಗಳ ಔಷಧಿಗಳು :** ಪ್ರಸ್ತುತ ದಿನಗಳಲ್ಲಿ ದನಗಳಿಗೆ ಬರುವಂತ ರೋಗಗಳಿಗೆ ನಾಟಿ ಔಷಧಿಗಳಗಳು ಕೊಡುವದು ಕಡಿಮೆ, ಅಂಗಡಿಗಳಲ್ಲಿ ಸಿಗುವ ಔಷಧಿಗಳನ್ನು ಹೆಚ್ಚು ಬಳಸುವರು. ಅದರೆ ದನಗಾಹಿಗಳು ಬಹಳಷ್ಟು ದನಗಳನ್ನು ಸಾಕಾಣಿಕೆ ಮಾಡುತಿರುವುದರಿಂದ ಅವುಗಳಿಗೆ ಔಷಧಿಗಳಿಗೆಂದೆ ವರ್ಷದಲ್ಲಿ 10,000 ರೂ.ಗಳಿಂದ 20,000 ರೂ.ಗಳವರೆಗೂ ಖರ್ಚಾಗುತ್ತದೆ.

**ಉಪಸಂಹಾರ**

ಒಟ್ಟಾರೆಯಾಗಿ ಅಲೆಮಾರಿ ದನಗಾಹಿಗಳ ಆರ್ಥಿಕ ಸ್ಥಿತಿಯನ್ನು ನೋಡಿದಾಗ ಬೇರೆ ಸಮುದಾಯಗಳ ಜನರಿಗಿಂತ ಉತ್ತಮವಾಗಿಲ್ಲ. ಆದರೆ ಇವರು ದನಗಳ ಸಾಕಾಣಿಕೆಯನ್ನು ಬಿಟ್ಟು ಬೇರೆ ಯಾವುದೇ ವೃತ್ತಿ/ಕಸುಬು ಮಾಡುವುದಿಲ್ಲ. ಇವುಗಳಿಂದ ಬರುವ ಸ್ವಲ್ಪ ಮಟ್ಟದ ಹಣವು ತಮ್ಮ ಕುಟುಂಬಗಳ ಜೀವನ ನಿರ್ವಹಣೆಗಾಗಿ ಸಾಕಗುತ್ತದೆ. ಹಾಗೂ ದನಗಳ ಸಾಕಾಣಿಕೆಯ ಪರಿಕರಗಳು, ಔಷಧಿಗಳಿಗಾಗಿ ಹಣ ಖರ್ಚಾಗಿಬಿಡುತ್ತದೆ. ದನಗಾಹಿಗಳು ಹೆಚ್ಚಿನ ಸಂಖ್ಯೆಯಲ್ಲಿ ದನಗಳನ್ನು ಸಾಕುವುದರಿಂದ ಇವರ ದನಗಳಿಗೆ ಕಡಿಮೆ ದರದಲ್ಲಿ ಔಷಧಿಗಳು ಸಿಗುವಂತಾಗಬೇಕು. ಹಾಗೆಯೇ ಸರ್ಕಾರದಿಂದ ಆರ್ಥಿಕ ನೆರವು ಸಿಕ್ಕಾಗ ಮಾತ್ರ ದನಗಾಹಿಗಳು ಕೂಡ ಸ್ವಲ್ಪ ಮಟ್ಟಿಗಾದರು ಸಾಮಾಜಿಕವಾಗಿ, ಆರ್ಥಿಕವಾಗಿ ಉತ್ತಮ ಜೀವನ ನಡೆಸಲು ಸಾಧ್ಯವಾಗಬಹುದು.

**ಪರಾಮರ್ಶನ ಸಾಹಿತ್ಯ**

ಮೇತ್ರಿ ಕೆ ಎಂ, ೨೦೦2, ಬುಡಕಟ್ಟುಗಳ ಕುಲಕಸುಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲ, ಹಂಪಿ.

**ಮಾಹಿತಿದದರ ವಿವರ**

| ಕ್ರ. ಸಂ | ಹೆಸರು | ವಯಸ್ಸು | ವೃತ್ತಿ | ಸಮುದಾಯ | ದನಗಳ ಸಂಖ್ಯೆ | ಮಾಹಿತಿದಾರರ ಊರು; ತಾಲೂಕು; ಜಿಲ್ಲೆ; | ಸಂದರ್ಶಿಸಿದ ಊರು; ತಾಲೂಕು; ಜಿಲ್ಲೆ; |
|---|---|---|---|---|---|---|---|
| 1 | ಮಂಜುನಾಥ | 28 | ದನಗಾಹಿ | ಗಾಣಿಗ ಲಿಂಗಾಯತ | 400 | ಗಂಗನಾಳ್(ಗ್ರಾ) ಗಂಗಾವತಿ(ತಾ) ಕೊಪ್ಪಳ(ಜಿ) | ಬುಕ್ಕಸಾಗರ(ಗ್ರಾ) ಹೊಸಪೇಟೆ(ತಾ) ವಿಜಯನಗರ(ಜಿ)) |
| 2 | ವೆಂಕಪ್ಪ | 48 | ದನಗಾಹಿ | ಕೃಷ್ಣ ಗೊಲ್ಲ | 300 | ಕನಕಗಿರಿ(ಗ್ರಾ) ಗಂಗಾವತಿ(ತಾ) ಕೊಪ್ಪಳ(ಜಿ) | ಬುಕ್ಕಸಾಗರ(ಗ್ರಾ) ಹೊಸಪೇಟೆ(ತಾ) ವಿಜಯನಗರ(ಜಿ)) |
| 3 | ಕುಂಟೆಪ್ಪ ನವಿಲಿ | 52 | ದನಗಾಹಿ | ವಾಲ್ಮೀಕಿ ಸಮುದಾಯ | 250 | ಗಂಗನಾಳ್(ಗ್ರಾ) ಗಂಗಾವತಿ(ತಾ) ಕೊಪ್ಪಳ(ಜಿ) | ಬುಕ್ಕಸಾಗರ(ಗ್ರಾ) ಹೊಸಪೇಟೆ(ತಾ) ವಿಜಯನಗರ(ಜಿ) |
| 4 | ಹನುಮಕ್ಕ | 38 | ದನಗಾಹಿ | ಕೃಷ್ಣ ಗೊಲ್ಲ | 400 | ವೆಂಕಪುರ(ಗ್ರಾ) ಗಂಗಾವತಿ(ತಾ) ಕೊಪ್ಪಳ(ಜಿ) | ಬುಕ್ಕಸಾಗರ(ಗ್ರಾ) ಹೊಸಪೇಟೆ(ತಾ) ವಿಜಯನಗರ(ಜಿ)) |
| 5 | ಮಾನಪ್ಪ(ಹಿರೇ ಬಂಡಾಳ) | ೫೨ | ದನಗಾಹಿ | ಊರು ಕುರುಬ | 100 | ನರೆಗುಂಭೆ(ಗ್ರಾ) ಕುಷ್ಟಗಿ(ತಾ) ಕೊಪ್ಪಳ(ಜಿ) | ಚಿಕ್ಕರಾಮಪುರ 1(ಗ್ರಾ) ಹೊಸಪೇಟೆ(ತಾ) ವಿಜಯನಗರ(ಜಿ) |